# ಹರ್ಷಿಕಾ ಹೊಸ 'ದರ್ಬಾರ್'



ಕಳೆದ ವರ್ಷ ಹೆಚ್ಚು ಸಿನಿಮಾಗಳಲ್ಲಿ ನಟಿಸಿದ ಕನ್ನಡದ ನಾಯಕಿಯರಲ್ಲಿ ಹರ್ಷಿಕಾ ಪೂಣಚ್ಚ ಕೂಡ ಒಬ್ಬರು. ಅವರ ಅಭಿನಯದ 'ಅಲೆ', 'ಸೈಕಲ್', 'ಮಂಗನ ಕೈಲಿ ಮಾಣಿಕ್ಯ', 'ಅದ್ವೈತ, 'ಬಿ3' ಸಿನಿಮಾಗಳು ತೆರೆ ಕಂಡವು. ಇಷ್ಟು ಸಿನಿಮಾಗಳು ತೆರೆ ಕಂಡು, ಅಭಿನಯದ ಮಟ್ಟಿಗೆ ಸಹೃದಯರು ಮೆಚ್ಚಿಕೊಂಡರೂ, ಹರ್ಷಿಕಾ ಅವರ ಪಾಲಿಗೆ 2013 ಸ್ಮರಣೀಯ ವರ್ಷವೇನೂ ಅಲ್ಲ. ಸಾಲು ಸಾಲು ಸಿನಿಮಾಗಳಲ್ಲಿ ನಟಿಸಿದರೂ ನೆನಪಿನಲ್ಲಿ ಉಳಿಯುವಂಥ ಪಾತ್ರಗಳು ಅವರಿಗೆ ಸಿಕ್ಕಿದ್ದು ಕಡಿಮೆ.

ಹಾಗೆ ನೋಡಿದರೆ, ಪೋಷಕ ನಟಿಯಾಗಿಯೇ ಹರ್ಷಿಕಾ ಅವರಿಗೆ ಗಟ್ಟಿ ಪಾತ್ರಗಳು ಸಿಕ್ಕಿವೆ. 'ಸುಗ್ರೀವ' ಮತ್ತು 'ಜಾಕಿ' ಚಿತ್ರಗಳಲ್ಲಿನ ಪಾತ್ರಗಳು ಚಿಕ್ಕವಾದರೂ ಪರಿಣಾಮಕಾರಿ ಆಗಿದ್ದವು. 'ತಮಸ್ಸು' ಚಿತ್ರದ ಪಾತ್ರವಂತೂ ಅವರಿಗೆ 'ಅತ್ಯುತ್ತಮ ಪೋಷಕ ನಟಿ' ರಾಜ್ಯ ಪ್ರಶಸ್ತಿ ತಂದುಕೊಟ್ಟಿದೆ. ಈ ಯಶಸ್ಸನ್ನು ಅವರು ನಾಯಕಿಯಾಗಿಯೂ ಹಂಬಲಿಸುತ್ತಿದ್ದಾರೆ.

2013ರ 'ಮಂಗನ ಕೈಲಿ ಮಾಣಿಕ್ಯ' ಸಿನಿಮಾ ಚೆನ್ನಾಗಿದ್ದರೂ ಅದು ಗೆಲ್ಲದ ಕಾರಣ ಹರ್ಷಿಕಾ ಅವರಿಗೆ ಹೆಚ್ಚು ಪ್ರಚಾರ ಸಿಗಲಿಲ್ಲ. ಈ ಕೊರಗು ಅವರಲ್ಲೂ ಇದೆ. 'ಅದ್ವೈತ' ಚಿತ್ರದ ಪರಿಸ್ಥಿತಿಯೂ ಭಿನ್ನವಲ್ಲ. ಹಾಗಾಗಿ, 2014ರಲ್ಲಿ ಒಳ್ಳೆಯ ಪಾತ್ರಗಳನ್ನು ಆರಿಸಿಕೊಂಡು ತಮ್ಮ ವೃತ್ತಿಬದುಕನ್ನು ಯಶಸ್ವಿಯಾಗಿ ರೂಪಿಸಿಕೊಳ್ಳುವ ಆಸೆ ಅವರದು. 'ಮೈನಾ' ಚಿತ್ರದಂತಹ ಪಾತ್ರ ನನಗೆ ಸಿಗಬೇಕು. ಅಂಗವಿಕಲೆಯ ಪಾತ್ರಕ್ಕೆ ಜೀವ ತುಂಬುವುದು ಸವಾಲು ಎನ್ನುವ ಹರ್ಷಿಕಾ– ಮಾನಸಿಕ ಅಸ್ವಸ್ಥೆಯ ಪಾತ್ರದಲ್ಲಿ ನಟಿಸಲೂ ಕನಸು ಕಾಣುತ್ತಿದ್ದಾರೆ. 'ಒಳ್ಳೆಯ ಪಾತ್ರಗಳು ದೊರೆತರಷ್ಟೇ ತಮ್ಮೊಳಗಿನ ಕಲಾವಿದೆ ಅನಾವರಣಗೊಳ್ಳಲು ಸಾಧ್ಯ' ಎನ್ನುವುದು ಅವರ ಅನಿಸಿಕೆ.

ಅಂದಹಾಗೆ, ಕಳೆದ ವಾರ ಸೆಟ್ಟೇರಿರುವ 'ಲವ್ ದರ್ಬಾರ್' ಚಿತ್ರದ ಬಗ್ಗೆ ಹರ್ಷಿಕಾ ಅವರಿಗೆ ನಿರೀಕ್ಷೆಗಳಿವೆ. ಹೊಸಮುಖಗಳೇ ಹೆಚ್ಚಾಗಿರುವ ಈ ಸಿನಿಮಾದಲ್ಲಿ ಹರ್ಷಿಕಾ ಅವರೇ ಅನುಭವೀ ತಾರೆ. ಹೊಸ ಪ್ರತಿಭೆಗಳೊಂದಿಗೆ ಕೆಲಸ ಮಾಡುವ ಸವಾಲು ಮತ್ತು ಅನುಕೂಲಗಳ ಅರಿವಿನೊಂದಿಗೇ ಅವರು 'ಲವ್ ದರ್ಬಾರ್' ಒಪ್ಪಿಕೊಂಡಿದ್ದಾರೆ. ಈ ಚಿತ್ರದಲ್ಲಿ ಅವರದು ತನ್ನ ಜೀವನವನ್ನು ಪ್ರೀತಿಸುವ ಹಾಗೂ ತಾನು ಮಾಡುವ ಕೆಲಸದ ಬಗ್ಗೆ ಸ್ಪಷ್ಟ ತಿಳಿವಳಿಕೆಯುಳ್ಳ ಪ್ರಬುದ್ಧ ಹುಡುಗಿ ಪಾತ್ರ. ವಿಘ್ನೇಶ್ವರ ವಿಶ್ವ ಎನ್ನುವವರು ನಿರ್ದೇಶಿಸುತ್ತಿರುವ ಈ ಸಿನಿಮಾದ ನಾಯಕರಾಗಿ ಭುವನ್ ನಟಿಸುತ್ತಿದ್ದಾರೆ.

■ ರಘು

